ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.

ಯೋಜನೆಗಳ ಹೆಸರು	ಭೌತಿಕ ಗುರಿ	ಆರ್ಥಿಕ ಗುರಿ
1. ಸ್ವಾವಲಂಬನೆ ಸಾಲ ಹಾಗೂ ಸಹಾಯಧನ ಯೋಜನೆ	18	2.25.000
2. ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ	10	1.75.000
3. ನೇರಸಾಲ ಯೋಜನೆ (10%)	–	–
4. ಗಂಗಾ ಕಲ್ಯಾಣ ಯೋಜನೆ	35	35.00.000
5. ಶ್ರಮಶಕ್ತಿ ಯೋಜನೆ	04	1,00,000
6. ಭೂ ಖರೀದಿ ಯೋಜನೆ	–	–
ಒಟ್ಟು	**67**	**40.00.00**

ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದಷ್ಟು ಬೇಗನೆ ಅರ್ಹ ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

(ಇ) ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಕಾರ್ಯಕ್ರಮಗಳಿಗೆ 2007–08ನೇ ಸಾಲಿನಲ್ಲಿ ಸಹ ವಿವಿಧ ಕಾರ್ಯಕ್ರಮಗಳಿಗೆ ಆಯವ್ಯಯ ಲಭ್ಯತೆಯಾಧರಿಸಿ ಹಣ ಬಿಡುಗಡೆ ಮಾಡಲಾಗುತ್ತಿದೆ.

1130 (756) ಶ್ರೀಮತಿ ಪರಿಮಳ ಕೆ.ಎಸ್. (ಹನೂರು) :– ಮಾನ್ಯ ಪಶುಸಂಗೋಪನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಹನೂರು ವಿಧಾನಸಭಾ ಕ್ಷೇತ್ರದ ಯಾವ ಯಾವ ಸ್ಥಳಗಳಲ್ಲಿ ಪಶುಚಿಕಿತ್ಸಾಲಯಗಳಿವೆ?

(ಆ) ಹೊಸದಾಗಿ ಪಶುಚಿಕಿತ್ಸಾಲಯಗಳನ್ನು ಮಂಜೂರು ಮಾಡುವಂತೆ ಕೋರಿಕೆ ಬಂದಿದೆಯೇ?

(ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

(ಈ) ಹನೂರು ಕ್ಷೇತ್ರದಲ್ಲಿರುವ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರಕ್ಕೆ ಕೋರಿಕೆ ಬಂದಿದೆಯೇ?

(ಉ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ರೇವೂ ನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು)

(ಅ) ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 13 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ಸ್ಥಳವಾರು ವಿವರ ಈ ಕೆಳಗಿನಂತಿದೆ:–

ಕ್ರಮ ಸಂಖ್ಯೆ	ಪಶು ಆಸ್ಪತ್ರೆ	ಪಶುಚಿಕಿತ್ಸಾಲಯ	ಪ್ರಾಥಮಿಕ ಪಶುಚಿಕಿತ್ಸಾಲಯ
(1)	ಹನೂರು	ಕೌದಳ್ಳಿ	ಮಲೆಮಹದೇಶ್ವರ ಬೆಟ್ಟ
(2)	–	ರಾಮಾಪುರ	ಮಾರ್ಟಿಹಳ್ಳಿ
(3)	–	ಲೊಕ್ಕನಹಳ್ಳಿ	ಒಡೆಯರ ಪಾಳ್ಯ
(4)	–	ಕಾಮಗೆರೆ	ಸಿಂಗಾನಲ್ಲೂರು
(5)	–	ಬಂಡೆಹಳ್ಳಿ	ದೊಡ್ಡಿಂದುವಾಡಿ
(6)	–	ಹೂಗ್ಯಂ	ತೆಳ್ಳನೂರು

(ಆ) ಹೌದು. ಹೊಸ ಪಶುಚಿಕಿತ್ಸಾಲಯಗಳನ್ನು ತೆರೆಯಲು ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಾಳ್ಯ, ಮೀಣ್ಯಂ, ಅಜ್ಜೀಪುರ, ಬೈಲೂರು, ಹೂಗ್ಯಂ. ಗ್ರಾಮಗಳಿಗೆ ಪ್ರಸ್ತಾವನೆ ಬಂದಿದೆ.

(ಇ) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 170 ಪಸಸೇ 2006, ಬೆಂಗಳೂರು, ದಿನಾಂಕ 01–03–2007ರ ಪ್ರಕಾರ ಹೂಗ್ಯಂ ಗ್ರಾಮದಲ್ಲಿ ಹೊಸ ಪಶುಚಿಕಿತ್ಸಾಲಯ ತೆರೆಯಲು ಮಂಜೂರಾತಿ ನೀಡಲಾಗಿದೆ. ಉಳಿದ ಗ್ರಾಮಗಳಲ್ಲಿ ಡಾ: ಡಿ.ಎಂ. ನಂಜುಂಡಪ್ಪರವರ ಪ್ರಾದೇಶಿಕ ಅಸಮತೋಲನಾ ವರದಿಯನ್ವಯ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಪಶುಚಿಕಿತ್ಸಾಲಯ ಕೊರತೆ ಇರುವ ಕಡೆ ತೆರೆಯಲು ಮುಂದಿನ 8 ವರ್ಷಗಳಲ್ಲಿ ಕ್ರಮವಹಿಸಲಾಗುತ್ತಿದ್ದು, ಹನೂರು ವಿಧಾನಸಭಾ ಕ್ಷೇತ್ರದ ಮೇಲ್ಕಂಡ ಗ್ರಾಮಗಳನ್ನು ಪರಿಗಣಿಸಲಾಗುವುದು.

(ಈ) ಹೌದು. ದೊಡ್ಡಿಂದುವಾಡಿ, ಮಾರ್ಟಿಹಳ್ಳಿ, ಸಿಂಗಾನಲ್ಲೂರು. ಮಲೆಮಹದೇಶ್ವರ ಬೆಟ್ಟ, ಒಡಯನಪಾಳ್ಯ ಮತ್ತೆ ತೆಳ್ಳನೂರು ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾವನೆಗಳು ಬಂದಿದೆ.

(ಉ) ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಇಲಾಖೆಯಲ್ಲಿದ್ದು, ಹಂತ ಹಂತವಾಗಿ ಮಾಡಲಾಗುತ್ತಿದೆ.

ಮೇಲ್ದರ್ಜೆಗೇರಿಸುವ ಕಾರ್ಯಕ್ರಮಕ್ಕೆ ಯಾವುದೇ ಕಾಲ ನಿಗದಿಪಡಿಸಿಲ್ಲ. ಅವಶ್ಯಕತೆಗನುಗುಣವಾಗಿ ಪದವೀಧರರ ಪಶುವೈದ್ಯರ ಲಭ್ಯತೆ ಮೇಲೆ ಮೇಲ್ದರ್ಜೆಗೇರಿಸಲಾಗುತ್ತಿದ್ದು, ಮೇಲ್ದರ್ಜೆಗೇರಿಸುವ ವೇಳೆಯಲ್ಲಿ ಮೇಲ್ಕಂಡ ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಸಹ ಆದ್ಯತೆ ಮೇಲೆ ಪರಿಗಣಿಸಲಾಗುವುದು.

1131 (757) ಶ್ರೀಮತಿ ಪರಿಮಳ ಕೆ.ಎಸ್. (ಹನೂರು) :– ಮಾನ್ಯ ಪಶುಸಂಗೋಪನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2004–05ನೇ ಸಾಲಿನಿಂದ 2006–07ನೇ ಸಾಲಿನವರೆಗೆ ಪಶುಪಾಲನೆಗೆ ಔಷಧಿ ಖರೀದಿಸಲು ಒದಗಿಸಲಾದ ಅನುದಾನ ಎಷ್ಟು?

(ಆ) ಈ ಪೈಕಿ ಹನೂರು ವಿಧಾನ ಸಭಾ ಕ್ಷೇತ್ರದ ಪಶು ಆಸ್ಪತ್ರೆಗಳಿಗೆ ಒದಗಿಸಲಾದ ಪ್ರಮಾಣ ಎಷ್ಟು? (ಆಸ್ಪತ್ರೆವಾರು ವಿವರ ನೀಡುವುದು)

ಶ್ರೀ ರೇವೂ ನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು)

(ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ 2004–05ನೇ ಸಾಲಿನಿಂದ 2006–07ನೇ ಸಾಲಿನ ಒಟ್ಟಾರೆ 4162.33 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. ವರ್ಷಾವಾರು ವಿವರ ಈ ಕೆಳಗಿನಂತಿದೆ.

ವರ್ಷದ ವಿವರ	ರಾಜ್ಯವಲಯ ರೂ.ಲಕ್ಷಗಳಲ್ಲಿ	ಜಿಲ್ಲಾವಾರು ರೂ.ಲಕ್ಷಗಳಲ್ಲಿ	ಒಟ್ಟು ರೂ.ಲಕ್ಷಗಳಲ್ಲಿ
2004–05	585.00	410.00	995.00
2005–06	1060.00	461.0	1521.00
2006–07	1136.33	510.0	1646.33
ಒಟ್ಟು	2781.33	1381.0	4162.33

(ಆ) ಈ ಪೈಕಿ ಹನೂರು ವಿಧಾನಸಭಾ ಕ್ಷೇತ್ರದ 13 ಪಶುವೈದ್ಯ ಸಂಸ್ಥೆಗಳಿಗೆ ಒಟ್ಟಾರೆ 10.392 ಲಕ್ಷ ರೂ.ಗಳ ಔಷಧಿ ರಾಸಾಯನಿಕಗಳನ್ನು ಒದಗಿಸಲಾಗಿದೆ. ಆಸ್ಪತ್ರೆವಾರು, ವರ್ಷವಾರು ವಿವರಗಳನ್ನು ಅನುಬಂಧ–1ರಲ್ಲಿ ಸಲ್ಲಿಸಿದೆ.